ಶ್ರೀ ಎಂ ರಘುಪತಿ.—ನಾವೆಲ್ಲರೂ ಕನ್ನಡಕ್ಕೋಸ್ಕರ ಹೋರಾಟ ಮಾಡಿ ಜೈಲಿಗೆ ಹೋದವರು.

ಉಪಾಧ್ಯಕ್ಷರು.—ಉತ್ತರವನ್ನು ಓದಿ.

ಶ್ರೀ ಎಂ. ರಘುಪತಿ (ಸಾರಿಗೆ ಸಚಿವರ ಪರವಾಗಿ).—

ಬಾಗೆಪಲ್ಲಿಯು ಕೋಲಾರ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿದೆ. ಇಲ್ಲಿಯ ಜನಸಂಖ್ಯೆ ೭೯೨೩ ಆಗಿದ್ದು ತಾಲ್ಲೂಕಿನಲ್ಲಿ ೧೯೮೧ರ ಜನಗಣತಿಯಂತೆ ೧,೨೭, ೩೦೪ ಜನಸಂಖ್ಯೆ ಇರುತ್ತದೆ. ಈ ಜಿಲ್ಲೆಯು ಆಂಧ್ರ ಪ್ರದೇಶದ ಗಡಿಗೆ ಹತ್ತಿರವಾಗಿದೆ.

ಕ.ರಾ.ರ.ಸಾ. ಸಂಸ್ಥೆಯು ಬಾಗೇಪಲ್ಲಿ ಹಾಗೂ ಸುತ್ತಮುತ್ತಲಿನ ಸ್ಥಳಗಳಿಗೆ ಚಿಕ್ಕಬಳ್ಳಾಪುರ ಮತ್ತು ಚಿಂತಾಮಣಿ ಡಿಪೋಗಳಿಂದ ವಾಹನಗಳನ್ನು ಓಡಿಸಲಾಗುತ್ತಿದೆ. ಈ ಡಿಪೋಗಳು ಬಾಗೇಪಲ್ಲಿಯಿಂದ ಕ್ರಮವಾಗಿ ೪೨ ಕಿ.ಮೀ. ಮತ್ತು ೫೨ ಕಿ.ಮೀ.ಗಳ ಅಂತರದಲ್ಲಿರುತ್ತದೆ. ಅಲ್ಲದೆ ಬೆಂಗಳೂರು ವಿಭಾಗದಿಂದ ಕೂಡ ಹಲವಾರು ಸಾರಿಗೆ ವಾಹನಗಳು ಬಾಗೇಪಲ್ಲಿಯ ಮಾರ್ಗವಾಗಿ ಚಲಿಸುತ್ತವೆ. ಈ ಸಾರಿಗೆ ಸೇವೆಗಳಿಂದಾಗಿ ಬಾಗೇಪಲ್ಲಿಯ ಪ್ರಯಾಣಿಕರನ್ನು ಕೊಂಡೊಯ್ಯುವ ಸಾಮರ್ಥ್ಯವನ್ನು ಹೊಂದಿರುತ್ತದೆ. ದಿನಾಂಕ ೩೦-೩-೧೯೮೮ರ ಕರ್ನಾಟಕ ಗೆಜೆಟ್‌ನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕೋಲಾರ ಜಿಲ್ಲೆಯ ಉಳಿದ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡುವ ಯೋಜನೆಯನ್ನು ಪ್ರಕಟಿಸಿದೆ ಈ ರಾಷ್ಟ್ರೀಕರಣದೊಂದಿಗೆ ಹೆಚ್ಚಿನ ಸಾರಿಗೆ ಸಂಚಾರವನ್ನು ಮಾಡಲೇಬೇಕಾಗುತ್ತದೆ. ಈ ಅಧಿಕ ಸಾರಿಗೆಯಿಂದಾಗಿ ವಾಹನಗಳಿಗೆ ವಸತಿ ಮಂತ್ರ ನಿರ್ವಹಣೆಯ ಸೌಲಭ್ಯವನ್ನು ಒದಗಿಸಬೇಕಾಗಿರುವುದರಿಂದ ಕ.ರಾ.ರ.ಸಾ. ಸಂಸ್ಥೆಯು ಹೆಚ್ಚಿಗೆ ಡಿಪೋಗಳನ್ನು ತೆರೆಯಲು ಉದ್ದೇಶಿಸಿದೆ. ಆದಾಗ್ಯೂ ಡಿಪೋ ಸ್ಥಾಪಿಸಬೇಕಾಗಿರುವ ಸ್ಥಳವು ಆದಾಯ ರಹಿತ ಕಿ.ಮೀ.ಗಳು ಕಡಿಮೆ ಇರಬೇಕು ಮತ್ತು ಆರ್ಥಿಕ ಸಾಮರ್ಥ್ಯ ಹೊಂದಿರಬೇಕು ಜೊತೆಗೆ ಪ್ರಯಾಣಿಕರ ಒತ್ತಡವನ್ನು ಇಂತಹ ಸ್ಥಳಗಳಲ್ಲಿ ಗಮನಿಸಬೇಕಾಗುತ್ತದೆ.

ಪ್ರಸ್ತುತ, ಸಂಸ್ಥೆಯು ಬಾಗೇಪಲ್ಲಿಯಲ್ಲಿ ಡಿಪೋ ಅಥವಾ ಬಸ್ ನಿಲ್ದಾಣಕ್ಕಾಗಿ ತನ್ನದೇ ಆದ ಜಮೀನನ್ನು ಹೊಂದಿರುವುದಿಲ್ಲ. ಸಂಸ್ಥೆಯು ಆವಶ್ಯಕತೆಯನ್ನು ಗಮನಿಸಿ ಸೂಕ್ತವಾದ ಜಮೀನನ್ನು ವಶಪಡಿಸಿಕೊಂಡ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.

೯. ಮಂಗಳೂರು ನಗರ ಪಾಲಿಕೆಗೆ ಬರಬೇಕಾದ ೮೭-೮೮ ಆಕ್ಟ್ರಾಯ್ ಗ್ರಾಂಟ್ ಬಿಡುಗಡೆ ಬಗ್ಗೆ

ಶ್ರೀ ಬ್ಲೇಸಿಯಸ್ ಎಂ. ಡಿಸೌಜ.— ಮಾನ್ಯ ಅಧ್ಯಕ್ಷರೇ. ಮಂಗಳೂರು ನಗರಪಾಲಿಕೆಗೆ ಸರ್ಕಾರದಿಂದ ೧೯೮೭-೮೮ನೇ ಸಾಲಿಗೆ ಬರಬೇಕಾದ ಆಕ್ಟ್ರಾಯ್ ಗ್ರಾಂಟ್ ಒಂದು ಕೋಟಿ ೩೯ ಲಕ್ಷದ ೫೦ ಸಾವಿರ ರೂಪಾಯಿಗಳು, ಇನ್ನೂ ಬಾರದೆ ಇರುವುದರಿಂದ ಹಣದ ಅಡಚಣೆ ಅಧಿಕವಾಗಿದ್ದು ನಗರ ಪಾಲಿಕೆಯ ಕೆಲಸಕಾರ್ಯಗಳೆಲ್ಲಾ ಸ್ಥಗಿತವಾಗಿವೆ. ಈ ಹಣದ ಅಡಚಣೆಯನ್ನು ನೀಗಿಸುವ ದೃಷ್ಟಿಯಿಂದ ಸರ್ಕಾರದವರು ಸದರಿ ಗ್ರಾಂಟನ್ನು ಕೂಡಲೇ ಬಿಡುಗಡೆ ಮಾಡಿದಲ್ಲಿ ಇನ್ನುಳಿದಿರುವ ೨ ತಿಂಗಳ ಬೇಸಿಗೆ ಕಾಲದಲ್ಲಿ ನಗರ ಪಾಲಿಕೆಗೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಲು ಅಣುವಾಗುವುದರಿಂದ ಕೂಡಲೇ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ,

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).— ಮಾನ್ಯ ಅಧ್ಯಕ್ಷರೇ, ಮೊದಲ ಕಂತಿನ ಹಣವನ್ನು ೫೧,೧೦,೫೮೫ ರೂ.ಗಳನ್ನು ದಿ. ೨೨-೧೨-೧೯೮೭ರಂದು ಬಿಡುಗಡೆ ಮಾಡಲಾಗಿದೆ. ಇನ್ನೂ ಇದರ ಬಾಬ್ತು ೧೩೫,೯೧,೬೦೭ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ಈ ಬಗ್ಗೆ ನಾವು ಆರ್ಥಿಕ ಇಲಾಖೆಗೆ ಬರೆದಿದ್ದೇವೆ. ಅವರಿಂದ ಅನುಮತಿ ಬಂದ ತಕ್ಷಣ ಈ ಅನುದಾನವನ್ನು ಸಹ ಬಿಡುಗಡೆ ಮಾಡುತ್ತೇವೆ, ಈ ಬಗ್ಗೆ ನಾವು ಕ್ರಮ ಕೈಕೊಂಡಿದ್ದೇವೆ.

ಶ್ರೀಮತಿ ಸುಮಾ ವಸಂತ್.— (ಸದಸ್ಯರು ಹಾಜರಿಲ್ಲ).